೧೯೯೦ರಲ್ಲಿ ಅಲ್ಲಿ ಹೊಸಲು ಬೆಳಿಕು ಯೋಜನೆಯನ್ನು ಪ್ರಾಸೋದ್ಯಮ ಇಲಾಖೆಯಿಂದ ತೆಗೆದು ಕೊಂಡರು. ಇದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಯಾವಾಗ ಕೊಡಲಾಯಿತು ? ಎಷ್ಟು ಹಣಕ್ಕೆ ಕೊಡಲಾಯಿತು ? ಇದಕ್ಕೆ ತಾಂತ್ರಿಕ ಮಂಜೂರಾತಿಯನ್ನು ಯಾವಾಗ ಕೊಡಲಾಯಿತು? ಈ ಕೆಲಸ ಇಲ್ಲಿಯವರೆಗೆ ಏತಕ್ಕೆ ಪ್ರಾರಂಭವಾಗಿಲ್ಲ ? ಇದಕ್ಕೆ ಕಾರಣಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ.— ಸನ್ಮಾನ್ಯ ಅಧ್ಯಕ್ಷರೆ, ಈಗ ವೀರರಾಣಿ ಕಿತ್ತೂರು ಚೆನ್ನಮ್ಮ ಅವರ ಸಮಾಧಿಗೆ ಹೊಸಲು ಬೆಳಕಿನ ವ್ಯವಸ್ಥೆ ಮಾಡಬೇಕೆಂದು ಅದನ್ನು ಅಳವಡಿಸುವುದಕ್ಕೆ ಲೋಕೋಪಯೋಗಿ ಇಲಾಖೆ ೨,೯೯,೭೨೦ ರೂಪಾಯಿಗಳಿಗೆ ಅಂದಾಜು ತಯಾರ ಮಾಡಿದೆ. ಇದನ್ನು ಸರ್ಕಾರ ೨೪-೨-೯೯ರಲ್ಲಿ ಮಂಜೂರಾತಿ ಮಾಡಿದೆ. ಆದರೆ ೯೯-೯೦ನೇ ಸಾಲಿನಲ್ಲಿ ಹಣದ ಉಳಿತಾಯ ಇಲ್ಲವೇ ಇದ್ದುದರಿಂದ ೧೬-೧೧-೯೯ರಲ್ಲಿ ಪುನಃ ಈ ಆಜ್ಞೆಯನ್ನು ನವೀಕರಿಸಿದೆ. ಈ ಬಿಲ್‌ಗಳನ್ನು ತಯಾರಿಸಿ ೬-೩-೯೦ರಲ್ಲಿ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಕಳುಹಿಸುವುದಕ್ಕೆ ನಮ್ಮ ನಿರ್ದೇಶಕರು ಹೇಳಿದ್ದಾರೆ. ಆದರೆ ಇಲಾಖೆ ಬಿಲ್‌ಗಳನ್ನು ತಾನೇ ತಯಾರಿಸಿ ಖಜಾನೆಯಿಂದ ಹಣ ತೆಗೆಯಲು ಪ್ರಯತ್ನ ನಡೆದರೂ ಅದು ಆಗಲಿಲ್ಲ. ಇದು ಆಗಬೇಕಾದ ಕೆಲಸ. ಬಹುಶಃ ಇಲಾಖೆಗಳ ಮಧ್ಯದಲ್ಲಿ ಸ್ವಲ್ಪ ಕಮ್ಯೂನಿಕೇಷನ್ ಗ್ಯಾಪ್ ನಿಂದಾಗಿ ಈ ಕೆಲಸ ಆಗಲಿಲ್ಲ. ಆದರೆ ೨೧-೪-೯೦ರಂದು ಪುನಃ ಇದನ್ನು ಆಗಬೇಕಾಗಿರುವ ಕೆಲಸ ವೆಂದು ನವೀಕರಿಸಿ ಲೋಕೋಪಯೋಗಿ ಇಲಾಖೆಗೆ ಈ ಕೆಲಸವನ್ನು ಕೂಡಲೇ ಪ್ರಾರಂಭ ಮಾಡ ಬೇಕೆಂದು ಈಗಾಗಲೇ ಆದೇಶವನ್ನು ನೀಡಿದ್ದೇವೆ. ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಆದಷ್ಟು ಜಾಗ್ರತೆ ಈ ಕೆಲಸವನ್ನು ಸಂಪೂರ್ಣ ಮಾಡುತ್ತೇವೆ.

ಶ್ರೀ ಎಸ್. ಹೆಚ್. ಕೌಜಲಗಿ — ಇವತ್ತಿನ ದಿವಸ ಈ ಪ್ರವಾಸೋದ್ಯಮ ಇಲಾಖೆಯವರು ಲೋಕೋಪಯೋಗಿ ಇಲಾಖೆಯವರಿಗೆ ಬರೆಯುತ್ತಾರೆ. ಏನೆಂದರೆ ನೀವು ಬಿಲ್ ಕಳುಹಿಸಿಕೊಡಿ ರೊಕ್ಕ ಕೊಡುತ್ತೇವೆ ಎಂಬುದಾಗಿ ಬರೆಯುತ್ತಾರೆ. ಯಾವುದೇ ಇಲಾಖೆಯಾಗಲಿ ಕೆಲಸ ಮಾಡಿದ ನಂತರ ಬಿಲ್ಲನ್ನು ಕೊಡಬೇಕಾಗುತ್ತದೆ. ಕೆಲಸ ಮಾಡದಿದ್ದರೆ ಅವರಿಗೆ ಹಣವನ್ನು ಕೊಡುವುದಾದರೂ ಹೇಗೆ ? ಆಡಳಿತಾತ್ಮಕ ಅಪ್ರೂವಲ್ ಕೊಟ್ಟ ತಕ್ಷಣವೇ ನಮಗೆ ಎನ್.ಓ.ಸಿ. ಕೊಟ್ಟುಬಿಡಿ, ನಾವು ಮಾಡುತ್ತೇವೆ ಅಂತ ಹೇಳುತ್ತಾರೆ. ಅಲ್ಲಿ ಕೆಲಸವನ್ನೇ ತೆಗೆದುಕೊಂಡಿಲ್ಲ. ಆದರೂ ಬಿಲ್ಲನ್ನು ಕಳುಹಿಸಿಕೊಡಿ ಅಂತ ಹೇಳಿದರೆ ಇದು ಯಾವ ಕಾಲಕ್ಕೆ ಆಗಬೆ ಕು ? ಈ ಒಂದು ಕೆಲಸದ ಸಲುವಾಗಿ ನಾನು ಮಾನ್ಯ ಮಂತ್ರಿಗಳನ್ನು ೩ ಸಲ ಭೇಟಿಯಾಗಿದ್ದೇನೆ, ತಾವು ಸಹಾನುಭೂತಿಯಿಂದ ಪರಿಶೀಲಿಸಿ ನನ್ನ ಅಪ್ಲಿಕೇಷನ್ ಮೇಲೆ ಬರೆದಂಕೊಟ್ಟಿರಿ. ಮಂತ್ರಿಮಂತ್ರಿಗಳನ್ನು ಎರಡು ಸಲ ಭೇಟಿಯಾಗಿದ್ದು ಅವರ ಬರೆದಿದ್ದಾರೆ. ಕಾರ್ಯದರ್ಶಿಯವರನ್ನು ೩ ಸಲ ಭೆ ಟಿಯಾಗ್ತೇನೆ. ಅಧಿಕೃತಕ ಒಬ್ಬ ಅಧಿಕಾರಿಯು ತಪ್ಪಿನಿಂದಾಗಿ ಈ ಕೆಲಸ ಆಗದೆ ನಿಂತಿದೆ. ಆದ್ದರಿಂದ ಯಾವುದೇ ಪರಿಸ್ಥಿತಿ ಇರಲಿ, ಆದಷ್ಟು ಬೇಗ ಈ ಕೆಲಸ ಆಗುವಂತೆ ನೋಡಿಕೊಳ್ಳಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.— ಅದನ್ನು ಮಾಡುತ್ತೇವೆಂದೇ ಹೇಳಿದ್ದಾರೆ.

ಶ್ರೀ ಎಸ್. ಹೆಚ್. ಕೌಜಲಗಿ.— ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು.— ಎಷ್ಟೇ ಒತ್ತಾಯಪೂರ್ವಕವಾಗಿ ಹೇಳುತ್ತಿದ್ದರೂ ಕೂಡ...

ಶ್ರೀ ಎಸ್. ಹೆಚ್. ಕೌಜಲಗಿ.— ಬರೆಯುಕೊಟ್ಟರೂ ಏಕೆ ಆಗಲಿಲ್ಲ ?

ಅಧ್ಯಕ್ಷರು.— ಇದರ ಬಗ್ಗೆ ಈಗಾಗಲೇ ಮಂತ್ರಿಗಳು ಹೇಳಿದ್ದಾರೆ. ಅದನ್ನು ಮಾಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಸದಸ್ಯರ ಕಳಕಳಿ ಸರಿ. ಈ ಸರ್ಕಾರದ ಬೇರೆ ಬೇರೆ ಇಲಾಖೆಯಲ್ಲಿ ಕೆಲವೊಂದು ಸಲ ಇದೇ ಪರಿಸ್ಥಿತಿಯಲ್ಲಿ ಆಗುತ್ತದೆ. ಇದಕ್ಕಾಗಿ ವ್ಯಸನಪಡಬೇಕಾಗಿದೆ. ಏಕೆಂದರೆ ಮಂಜೂರಾತಿಯನ್ನು ಮಾಡಿದಮೇಲೆ ಅದನ್ನು ಅನುಷ್ಠಾನಕ್ಕೆ ಕೊಡಬೇಕಾದುದು ಆಯಾ ಇಲಾಖೆಯ ಕರ್ತವ್ಯ. ಮುಂದೆ ಈ ಲೋಪ ಆಗದ ಹಾಗೆ ನೋಡಿಕೊಳ್ಳುತ್ತೇವೆ. ಈ ಕೆಲಸವನ್ನು ಮಾಡಬೇಕಾಗಿದೆ. ಅದನ್ನು ಮಾಡಿಸುತ್ತೇನೆ.

ಹಿರೇಕೆರೂರಿನಲ್ಲಿರುವ ಕ.ರಾ.ರ.ಸಾ. ಸಂಸ್ಥೆಯ ಘಟಕ.

೧೮೬. ಶ್ರೀ ಬಿ. ಎಚ್. ಬನ್ನೀಕೋಡ್(ವಿ.ಸ.ಸ.).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ರಸ್ತೆ ಸಾರಿಗೆಯ ಹುಬ್ಬಳ್ಳಿ ವಿಭಾಗದಲ್ಲಿ ಹಿರೇಕರೂರು ಘಟಕವು ಹೆಚ್ಚು ಲಾಭ ದಾಯಕವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಅ) ಹಿರೇಕೆರೂರು ಘಟಕದಲ್ಲಿ ಸುಸ್ಥಿತಿಯಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು ?

ಆ) ಇಲ್ಲಿ ಬಸ್ಸುಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಈ ಕೊರತೆಯನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಕೆ. ಜೆ. ಜಾರ್ಜ್(ಸಾರಿಗೆ ಮಂತ್ರಿಗಳು).—

ಅ) ಬಂದಿದೆ. ೧೯೮೮-೮೯ನೇ ಸಾಲಿನಲ್ಲಿ ಹಿರೇಕೆರೂರು ಘಟಕವು ೩೩.೨೨ ಲಕ್ಷ ರೂ. ಗಳ ಲಾಭಗಳಿಸಿತ್ತು ಆದರೆ, ೧೯೮೯-೯೦ನೇ ಸಾಲಿನಲ್ಲಿ ಅದು ೧೯.೫೭ ಲಕ್ಷ ರೂ. ಗಳ ನಷ್ಟ ಅನುಭವಿಸಿದೆ.

ಆ) ಹಿರೇಕರೂರು, ಘಟಕದಲ್ಲಿ ಸುಸ್ಥಿತಿಯಲ್ಲಿರುವ ವಾಹನಗಳ ಸಂಖ್ಯೆ ೯೩.

ಇ) ದಿನಾಂಕ ೪-೬-೧೯೯೦ರಲ್ಲಿ ಇದ್ದಂತೆ ಹಿರೇಕೆರೂರು ಘಟಕದಲ್ಲಿ ೯೧ ಅನುಸೂಚಿಗಳ ಆಚರಣೆಗೆ ೧೦೧ ಬಸ್ಸುಗಳಿದ್ದು, ಬಸ್ಸುಗಳ ಕೊರತೆ ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಬಿ. ಹೆಚ್. ಬನ್ನೀಕೋಡ್.—ಮಾನ್ಯ ಸಾರಿಗೆ ಸಚಿವರಿಗೆ ಹಿರೇಕೆರೂರು ಘಟಕದಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು ? ಸುಸ್ಥಿತಿಯಲ್ಲಿ ಎಷ್ಟು ಇವೆ ಎಂಬುದಾಗಿ ಕೇಳಿದ್ದಕ್ಕೆ ಮಾನ್ಯ ಸಚಿವರು ಸುಸ್ಥಿತಿಯಲ್ಲಿ ಸಾಕಷ್ಟು ಬಸ್ಸುಗಳು ಇವೆ ಎಂತಲೂ, ೧೯೮೮-೮೯ನೇ ಸಾಲಿನಲ್ಲಿ ೩೩.೨೨ ಲಕ್ಷ ರೂಪಾಯಿಗಳ ಲಾಭವಾಗಿದೆ ಎಂದು ಹೇಳಿದ್ದಾರೆ. ಅವರು ಮುಂದುವರಿದು ೧೯೮೯-೯೦ನೇ ಸಾಲಿನಲ್ಲಿ ೧೯.೫೭ ಲಕ್ಷ ರೂಪಾಯಿಗಳ ನಷ್ಟವಾಗಿದೆ ಎಂದು ಹೇಳಿದ್ದಾರೆ. ಇದಕ್ಕೆ ಕಾರಣ ಏನು ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ಬಸ್ಸುಗಳು ಸಾಕಷ್ಟು ಸಂಖ್ಯೆಯಲ್ಲಿ ಸುಸ್ಥಿತಿಯಲ್ಲಿದ್ದರೆ ಆದಾಯ ಏಕೆ ಕಡಿಮೆಯಾಗಿರುತ್ತದೆ ? ಹಿಂದಿನ ಅಧಿಕಾರಿಗಳು ದಕ್ಷರಾಗಿದ್ದರು, ಈಗಿನ ಅಧಿಕಾರಿಗಳ ಆ ದಕ್ಷತೆಯಿಂದ ಈ ರೀತಿಯ ನಷ್ಟವಾಗುತ್ತಿದೆ. ಸರಿಯಾದ ಸಮಯಕ್ಕೆ ಬಸ್ಸುಗಳು ಓಡಿಸುತ್ತಿಲ್ಲ. ಕೆಟ್ಟುಹೋದ ಬಸ್ಸುಗಳನ್ನು ರಿಪೇರಿ ಮಾಡುತ್ತಿಲ್ಲ. ಇದು ಸಂಬಂಧಪಟ್ಟ ಅಧಿಕಾರಿಗಳ ಬೇಜವಾಬ್ದಾರಿಯಿಂದ ಈ ಘಟಕವು ನಷ್ಟವನ್ನು ಅನುಭವಿಸುತ್ತಿದೆ. ಜನರಿಗೆ ಯಾವ ಕಾಲಕ್ಕೆ ಬಸ್ಸುಗಳು ಬರುತ್ತವೆ ಎಂಬುದೂ ಸಹ ಗೊತ್ತಿಲ್ಲ. ೩ ತಾಸು ಆರು ತಾಸು ತಡವಾಗಿ ಬರುತ್ತವೆ. ಒಂದೊಂದು ಸಾರಿ ಬರುವುದೇ ಇಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡು ಸರಿಯಾದ ವೇಳೆಗೆ ಬಸ್ಸುಗಳನ್ನು ಓಡಿಸುವ ವ್ಯವಸ್ಥೆ ಮಾಡಬೇಕೆಂದು ಹಾಗೂ ಲಾಭ ಗಳಿಸುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಈ ಹಿರೇಕೆರೂರ್ ಡಿಪೋ ೧೯೮೮-೮೯ನೇ ಸಾಲಿನಲ್ಲಿ ೩೩.೨೨ ಲಕ್ಷ ರೂಪಾಯಿಗಳ ಲಾಭ ಮಾಡಿದೆ. ೧೯೮೯-೯೦ನೇ ಸಾಲಿನಲ್ಲಿ ೧೯.೫೭ ಲಕ್ಷ ರೂಪಾಯಿಗಳ ನಷ್ಟವಾಗಿದೆ. ನಷ್ಟ ಏಕೆ ಆಗಿದೆ ಎಂಬುದಾಗಿ ಮಾನ್ಯ ಸದಸ್ಯರು ಕೇಳಿದರು. ಅದು ತಮಗೂ ಗೊತ್ತಿದ್ದ ಹಾಗೆ ನೌಕರರ ವೇತನವನ್ನು ಸುಮಾರು ಶೇಕಡ ೩೦ ರಷ್ಟು ಹೆಚ್ಚು ಮಾಡಿದ್ದೇವೆ. ಆದರ ಜೊತೆಗೆ ಟೈರು, ಟ್ಯೂಬುಗಳ ಬೆಲೆಗಳೂ ಜಾಸ್ತಿಯಾಗಿವೆ. ೧೯೮೯-೯೦ರ ಏಪ್ರಿಲ್‌ನಲ್ಲಿ ಈ ಡಿಪೋನಲ್ಲಿ ೧.೧೬ ಲಕ್ಷ ರೂಪಾಯಿಗಳ ಲಾಭ ಬಂದಿದೆ. ನಾವುಗಳು ಬಸ್ ದರವನ್ನು ಜಾಸ್ತಿ ಮಾಡಿದ್ದರಿಂದ ಈ ಲಾಭ ಬಂದಿದೆ. ಅಲ್ಲಿ ೧೦೧ ಬಸ್ಸುಗಳು ಇವೆ.

೧೨.೦೦ ಮಧ್ಯಾಹ್ನ

ಈ ಬಸ್‌ಗಳು ೯೧ ಶೆಡ್ಯೂಲ್‌ನಲ್ಲಿ ಓಡುತ್ತಿರುವುದರ ಜೊತೆಗೆ ೧೦ ಬಸ್‌ಗಳು ಇಲ್ಲಿ ಎಕ್ಸ್‌ಟ್ರಾ ಇವೆ. ಹಿರೇಕೆರೂರ್ ಘಟಕದಲ್ಲಿ ೩ ಬಸ್‌ಗಳು ರಿಪೇರಿಯಲ್ಲಿವೆ. ಫಿಟ್‌ನೆಸ್ ಸರ್ಟಿಫಿಕೇಟ್‌ಗಾಗಿ ೪ ಬಸ್‌ಗಳು ಇವೆ. ಒಂದು ಬಸ್ ಅಪಘಾತಕ್ಕೊಳಪಟ್ಟಿದೆ. ಈ ಘಟಕದಲ್ಲಿ ಶೆಡ್ಯೂಲ್‌ಗೆ ಸಾಕಷ್ಟು ಬಸ್‌ಗಳು ಇವೆ. ತಾವು ಹೇಳಿದ ಹಾಗೆ ಅಲ್ಲಿ ಬಸ್‌ಗಳು ಡಿಲೇ ಆಗುತ್ತಿದ್ದರೆ, ಆ ಬಗ್ಗೆ ವಿಚಾರಿಸಿಬಿಟ್ಟು ಸೂಕ್ತ ಕಾರ್ಯಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಬಿ. ಹೆಚ್. ಬನ್ನೀಕೋಡ್.—ಸರ್ಕಾರ ಸಾಕಷ್ಟು ಬಸ್ ಕೊಟ್ಟಿದ್ದರೂ ವೇಳೆಗೆ ಸರಿಯಾಗಿ ಅಲ್ಲಿ ಬಸ್‌ಗಳು ಬರುವುದಿಲ್ಲ. ಇದರಿಂದ ಜನರಿಗೆ, ಶಾಲಾ ಮಕ್ಕಳಿಗೆ, ಆಸ್ಪತ್ರೆಗೆ ಹೋಗುವವರಿಗೆ ಬಹಳ ತೊಂದರೆಯಾಗಿದೆ. ಇದರಿಂದ ಬೇಸತ್ತ ಜನರು ಸತ್ಯಾಗ್ರಹ ಮತ್ತು ಹೋರಾಟ ಮಾಡುತ್ತಿದ್ದಾರೆ. ಇಲ್ಲಿ ಇದ್ದಂತಹ ರೂಟ್‌ಗಳನ್ನೇ ತೆಗೆದುಹಾಕಿದ್ದಾರೆ. ಅಲ್ಲದೆ ಸಮಯಕ್ಕೆ ಸರಿಯಾಗಿ ಸಾಕಷ್ಟು ಬಸ್‌ಗಳನ್ನು ಓಡಿಸುವುದಿಲ್ಲ. ಆಸ್ಪತ್ರೆಗೆ ಹೋಗುವ ರೋಗಿಗಳು, ಶಾಲೆಗೆ ಹೋಗುವ

ಮಕ್ಕಳು ಇಡೀ ದಿವಸ ೩-೪ ಗಂಟೆ ಬಸ್‌ಗಾಗಿ ಕಾಯ್ದು ಕೆಲವು ಸಾರಿ ವಾಪಸ್ ಕೂಡಾ ಹೋಗುತ್ತಿದ್ದಾರೆ. ಈ ಘಟಕದಲ್ಲಿನ ಅಧಿಕಾರಿ ಜೇಜವಾಬ್ದಾರಿಯಿಂದ ಇದ್ದು ಸರಿಯಾಗಿ ಕೆಲಸ ಮಾಡುತ್ತಿರುವುದಿಲ್ಲ. ಇದನ್ನು ತಾವು ಪರಿಶೀಲನೆ ಮಾಡಬೇಕು. ಬಸ್‌ಗಳು ವೇಳೆಗೆ ಸರಿಯಾಗಿ ಓಡುವಹಾಗೆ ಸರಿಮಾಡಬೇಕು. ಮೊದಲು ಇದ್ದಹಾಗೆ ಹೆಚ್ಚಿನ ಅನುಕೂಲವನ್ನು ಜನರಿಗೆ ಒದಗಿಸಬೇಕು. ಇವತ್ತು ಆಲ್ಲಿನ ಜನರಿಗೆ ಈ ಬಗ್ಗೆ ತಾಳ್ಮೆ ಮೀರಿದೆ. ಈ ಬಗ್ಗೆ ಆದಷ್ಟು ಜಾಗ್ರತೆ ಕ್ರಮ ತೆಗೆದು ಸರಿಪಡಿಸಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಅವರು ಹೇಳಿದ ರೀತಿಯಲ್ಲಿ ರೂಟ್ ಕ್ಯಾನ್ಸಲ್ ಆಗಿದ್ದರೆ ಆ ಬಗ್ಗೆ ವಿಚಾರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್.—ಗ್ರಾಮಾಂತರ ಪ್ರದೇಶದಲ್ಲಿ ಮೊಸ ಬಸ್‌ಗಳನ್ನು ಹಾಕುವುದು ಇರಲಿ, ರೆಗ್ಯುಲರ್ ಓಡಾಡುತ್ತಿರುವ ಬಸ್‌ಗಳನ್ನೇ ನಿಲ್ಲಿಸಿಬಿಡುತ್ತಾರೆ. ಇನ್ನು ಕಾಡು ಪ್ರದೇಶದಲ್ಲಿ ಅಂತೂ ಆನೆಗಳ ಕಾಟದ ಜೊತೆಗೆ ಈ ಬಸ್‌ಗಳೂ ನಿಲುಗಡೆಯಾದರೆ ಆ ಜನರ ಸ್ಥಿತಿ ಏನು ? ಒಂದು ಕಡೆ ಆನೆಗಳ ಭಯ ಇನ್ನೊಂದು ಕಡೆ ಬಸ್ ಬರುವುದಿಲ್ಲ. ಇಂತಹ ಭಾಗಗಳಲ್ಲಿ ಆದ್ಯತೆ ಕೊಟ್ಟು ಹೆಚ್ಚು ಬಸ್ ಓಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಅಧ್ಯಕ್ಷರು.—ಇದು ಹಿರೇಕೆರೂರಿಗೆ ಸಂಬಂಧಪಟ್ಟ ಪ್ರಶ್ನೆ. ಅಲ್ಲಿ ಆನೆಗಳು ಇಲ್ಲ.

ಶ್ರೀ ಎಂ. ಮಹದೇವ್.—ಆಲ್ಲೂ ಆನೆಗಳು ಇವೆ. ಆಲ್ಲಿ ಕಾಡೂ ಸಹಾ ಇದೆ.

ಶ್ರೀ ಬಿ. ಹೆಚ್. ಬನ್ನೀಕೋಡ್.—ಆಲ್ಲಿ ಡಿಪೋ ಮೇನೇಜರ್ ಸರಿಯಾಗಿ ಜವಾಬ್ದಾರಿಯಿಂದ ಕೆಲಸ ಮಾಡುತ್ತಿಲ್ಲ. ಈ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತದೆ ?

ಅಧ್ಯಕ್ಷರು.—ನಿಮಗೆ ಎರಡು ಉಪಪ್ರಶ್ನೆಗೆ ಅವಕಾಶ ಕೊಟ್ಟಿದ್ದು ಅವಕ್ಕೆ ಸೂಕ್ತ ಉತ್ತರ ಪಡೆದುಕೊಂಡಿದ್ದೀರಿ. ಈಗ ಮುಂದಿನ ಪ್ರಶ್ನೆ.

ಅಧ್ಯಕ್ಷರು.—ಮಾನ್ಯ ಡಿಸೋಜ ಅವರೇ, ನಿಮ್ಮ ಚುಕ್ಕೆ ಪ್ರಶ್ನೆ ೩೭೪ನ್ನು ಇಂಧನ ಮಂತ್ರಿಗಳಿಗೆ ವರ್ಗಾವಣೆ ಆಗಿದೆ. ಅವರ ಖಾತೆಗೆ ಸಂಬಂಧಪಟ್ಟ ಪ್ರಶ್ನೋತ್ತರ ವೇಳೆಯಲ್ಲಿ ತಮ್ಮ ಪ್ರಶ್ನೆಗೆ ಉತ್ತರ ಬರುತ್ತದೆ.

ಏತ ನೀರಾವರಿ ಮೂಲಕ ನೀರಾವರಿಗೊಳಪಟ್ಟ ಪ್ರದೇಶದ ಬಗ್ಗೆ

೬೧೮. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).— ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ರಾಜ್ಯದಲ್ಲಿ (ಲಿಫ್ಟ್ ಇರಿಗೇಷನ್) ಏತ ನೀರಾವರಿ ಮೂಲಕ ಎಷ್ಟು ಎಕರೆಗೆ ನೀರಾವರಿಯಾಗಬಹುದು ಎಂದು ಅಂದಾಜಿಸಲಾಗಿದೆ;

ಆ) ಈಗ ರಾಜ್ಯದಲ್ಲಿ ಎಷ್ಟು ಎಕರೆ ಪ್ರದೇಶ ಏತ ನೀರಾವರಿಗೆ ಒಳಪಟ್ಟಿದೆ;

ಇ) ಹೊನ್ನಾವರ ತಾಲ್ಲೂಕು ಶರಾವತಿ ನದಿಯ ದಂಡೆ ಪ್ರದೇಶದಲ್ಲಿ ಎಷ್ಟು ಎಕರೆ ಪ್ರದೇಶ ಯಾತ ನೀರಾವರಿಗೆ ಒಳಪಡಿಸಲಾಗಿದೆ? ಇನ್ನೆಷ್ಟು ಪ್ರದೇಶ ನೀರಾವರಿಗೆ ಒಳಪಡಿಸಲಾಗುವುದು;

ಈ) ಹೊನ್ನಾವರ ತಾಲ್ಲೂಕು ಮುಂಕಿ ಗ್ರಾಮವನ್ನು ನೀರಾವರಿ ಕ್ಷೇತ್ರವಾಗಿ ಮಾರ್ಪಡಿಸಲು ಬಜೆಟ್ ಮಂಜೂರು ಮಾಡಲಾಗಿದೆಯೇ?

ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಯವರು).—

ಅ) ೯,೮೦,೦೦೦ ಎಕರೆಗಳು (ಉದ್ದೇಶಿತ ಏತ ನೀರಾವರಿ ಯೋಜನೆಗಳಿಂದ)

ಆ) ೩,೧೩,೯೦೭ ಎಕರೆಗಳು.

ಇ) ಹೊನ್ನಾವರ ತಾಲ್ಲೂಕಿನ ಶರಾವತಿ ನದಿಯ ದಂಡೆಯಲ್ಲಿ ೯ ಏತ ನೀರಾವರಿ ಯೋಜನೆಗಳ ಮೂಲಕ ಈಗಾಗಲೇ ೧೭೬೯ ಎಕರೆ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಾಗಿದೆ. ಇನ್ನೂ ೧೪,೫೨೮ ಎಕರೆ ಪ್ರದೇಶಕ್ಕೆ ಏತ ನೀರಾವರಿ ಸೌಲಭ್ಯ ಕಲ್ಪಿಸುವ ಪ್ರಸ್ತಾವನೆ ಇದೆ.